ಬಿಡಿಸಿ ನೋಡಲು ಯಾರಿಗೂ ವ್ಯವಧಾನ ಇರುವುದಿಲ್ಲ. ಒಟ್ಟಿನಲ್ಲಿ ಆತನಿಗೆ ಕೃತಕ ಕಾಲುಗಳನ್ನು ಜೋಡಿಸಲಾಗಿತ್ತು. ಬದುಕುಳಿದಿದ್ದ. ಏನೋ ಚೇತೋಹಾರಿ ಲವಲವಿಕೆ ಬಂತು. ಒಂದೂವರೆ ತಿಂಗಳ ಕಾಲ ಆಸ್ಪತ್ರೆಯಲ್ಲಿದ್ದ. ಮಂಡಿಗಳ ಮೇಲೆ ಭಾರ ಹಾಕಿ ನಡೆಯಬಹುದು ಎನಿಸಿತು. ಆಸ್ಪತ್ರೆಯಿಂದ ಕಳಿಸಿದರು.

ಎಲ್ಲಿಗೆ ಹೋಗುವುದು? ತಲೆಯ ಮೇಲೆ ಕಾರು ಹರಿದಿದ್ದರೇ ಸುಖವಿತ್ತು ಎನಿಸಿ ಆ ಆಸ್ಪತ್ರೆಯ ಹೊರಗಿನ ಒಂದು ಮೂಲೆಯಲ್ಲಿ ಕುಳಿತ. ಆ ಆಸ್ಪತ್ರೆಗೆ ಬರುವ ರೋಗಿಗಳೆಷ್ಟೋ ಬಂದು ಹೆಣಗಾಡಿ ಹೆಣವಾಗಿ ಹೋಗುವವರು ಎಷ್ಟೋ ಲೆಕ್ಕವೇ ಸಿಗುತ್ತಿರಲಿಲ್ಲ. ನರಕದ ಬೃಹತ್ ಕಾರ್ಖಾನೆಯಂತಿತ್ತು ಆಸ್ಪತ್ರೆ. ಆ ರೋಗಗಳು, ಆ ಆಸ್ಪತ್ರೆಯ ವೈದ್ಯರು, ಅಲ್ಲಿನ ಔಷಧೋದ್ಯಮ, ನಿರ್ದಯ ಸಾವು ನೋವಿನ ಕೂಪದಲ್ಲೂ ನಗುವ ನರ್ಸ್‌ಗಳು, ಹರಿವ ಹಣದ ಹೊಳೆ ಎಲ್ಲವೂ ರೇಜಿಗೆ ಹಿಡಿಸಿದವು. ಸೆಕ್ಯೂರಿಟಿ ಗಾರ್ಡ್‌ಗಳಲ್ಲಿ ಒಬ್ಬ ವಯಸ್ಸಾದವನು ಬಡಪಾಯಿಯ ಹತ್ತಿರ ಕರೆದು ಪರಿಚಯ ಮಾಡಿಕೊಂಡು ಹಿನ್ನೆಲೆ ವಿಚಾರಿಸಿದ. ಏನೋ ಹೇಳಿದ. ಏನೋ ಸಂಪರ್ಕವಾಯಿತು. ರೋಗಿಗಳ ಕಡೆಯವರು ಊಟ ಕೊಟ್ಟರು. ತೆವಳುತ್ತಲೇ ಅಲ್ಲೇ ಇದ್ದ ಕಸ ತೆಗೆದು ಹೋಗಿ ಬರುವವರ ಗಮನ ಸೆಳೆದ. ಕೆಲವರು ಅವನ ಜೀವನೋತ್ಸಾಹ ಕಂಡು ಟಿಪ್ಸ್ ಕೊಡಲು ಮುಂದಾದರು. ಆ ಕಾಸಿನಿಂದ ಅವನಿಗೆ ಉಪಯೋಗವೇನೂ ಇಲ್ಲ ಎನಿಸಿ ಸೆಕ್ಯೂರಿಟಿಯವನಿಗೆ ಕಲೆಕ್ಟ್ ಮಾಡಿ ಕೊಡತೊಡಗಿದ. ಕುಂಟನ ಮೇಲೆ ಕರುಣೆ ಬಂತು.



'ನಿನಗೆ ಒಂದು ಊರುಕೇರಿ ಜನಾನೇ ಇಲ್ಲವೇನಯ್ಯಾ... ನಿನಗೆ ಎಲ್ಲ ಇದ್ದಾರೆ ಎನಿಸುತ್ತೆ. ಇಲ್ಲದಿದ್ದರೆ ನಿನ್ನ ಟಿಪ್ಸ್ ಹಣವ ಇಷ್ಟು ಉದಾರವಾಗಿ ಕೊಡುತ್ತಿರಲಿಲ್ಲ. ಮನುಷ್ಯರು ನಿಗೂಢ ನಿಜ. ಆ ನಿಗೂಢವ ಕಳೆದುಕೊಳ್ಳುವುದೇ ಮುಕ್ತಿ. ನಿನಗೆ ದಾನ ಮಾಡಿದವರಿಗೆ ಏನೋ ಕರುಣೆ ಇದೆ. ನೀನು ಕೊಟ್ಟ ಕಾಸಿಂದ ನಾನು ನನ್ನ ಮೊಮ್ಮಕ್ಕಳಿಗೆ ಪಿಜ್ಜಾ, ಬರ್ಗರ್ ತಿನ್ನಿಸೋದು ಅಂದರೆ ಏನೋ ಪಾಪಪ್ರಜ್ಞೆ ಕಾಡುತ್ತೆ. ನಿನಗೊಂದು ದಾರಿ ತೋರಿಸಬೇಕು. ನನಗೊಬ್ಬ ವಿಚಿತ್ರ ಮನುಷ್ಯನ ಗೆಳೆತನವಿದೆ. ಅವನನ್ನು ಅರ್ಥ ಮಾಡಿಕೊಳ್ಳೋದು ಕಷ್ಟ. ಅವನು ಖಂಡಿತಾ ನೀನು ತಲುಪಬಹುದಾದ ದಡಕ್ಕೆ ಕರೆದೊಯ್ಯುವನು. ಅವನ ಜೊತೆ ಕಳಿಸಿ ಬಿಡುವೆ. ಸಿದ್ಧನಾಗಿರು' ಎಂದು ಸೆಕ್ಯೂರಿಟಿ ಏನೇನೋ ಹೇಳಿದ.

ಕುಂಟನಿಗೆ ಜಡತ್ವದಿಂದ ಬಿಡಿಸಿಕೊಳ್ಳಲು ಇದೊಂದು ಅವಕಾಶ ಎಂದು ಒಪ್ಪಿದ. 'ನನಗೆ ದಾರಿಗಳೇ ಮರೆತು ಹೋಗಿವೆ. ವಿಳಾಸವಿಲ್ಲದೆ ವಿಳಾಸವ ಹುಡುಕುವುದು ಹೇಗೆ' ಎಂದ. 'ಅಂಗೇನಿಲ್ಲಾ. ಒಂದು ರಸ್ತೆಯ ಹಿಡಿದು ಒಂದು ಹೆಜ್ಜೆಯ ಕಾಲೆತ್ತಿ ಕಾಲು ಕಿತ್ತು ಹೊರಟವೆಂದರೆ ನಾವು ಎಲ್ಲಿಗಾದರೂ ಹೋಗಬಹುದು. ಎಲ್ಲ ಮನುಷ್ಯರಿಗೂ ಇರುವುದು ಒಂದೇ ಹುಟ್ಟು, ಸಾವಿನ ದಾರಿ. ಅದಕ್ಕೆ ವಿಳಾಸ ಯಾಕೆ ಬೇಕು...' ಎಂದ ಸೆಕ್ಯೂರಿಟಿ.

'ಇಲ್ಲಾ ಅಣ್ಣಾ... ಮನುಷ್ಯ ದಾರಿ ತಪ್ಪಿ ದೇವರ ಹೆಸರೇಳಿಕೊಂಡು ಎಲ್ಲೆಲ್ಲೋ ಅಲೆದು ದಾರಿಗಳನ್ನೇ ಕಳೆದುಕೊಂಡು ಬಿಟ್ಟಿದ್ದಾನೆ. ನಿನ್ನ ಗೆಳೆಯನಿಗೆ ಈವರೆಗಿನ ಮನುಷ್ಯರ ಆವಿಷ್ಕಾರಗಳ ದಾರಿಗಳೆಲ್ಲಾ ಗೊತ್ತೇ?'

'ತ್ರಿಲೋಕಗಳ ಆಚೆಯ ತಾರಾಮಂಡಲಗಳ ದಾರಿಗಳೂ ಅವನಿಗೆ ಗೊತ್ತು. ಒಮ್ಮೆ ಅವನ ಜೊತೆ ಮೂರು ದಾರಿ ಕೂಡುವ ಜಾಗವ ದಾಟು... ಆಮೇಲೆ ನಿನಗೇ ಎಲ್ಲ ತಿಳಿಯುತ್ತೆ'

'ನನ್ನಂತಹ ಕುಂಟ ಅವನ ಜೊತೆ ಪಯಣ ಮಾಡಬಹುದೇ?'

'ನೀನು ತಲೆ ಕೆಡಿಸಿಕೊಳ್ಳಬೇಡ; ಪಯಣವೇ ನಿನ್ನ ದಡ ತಲುಪಿಸುತ್ತೆ'

'ಅದೆಂಗಣ್ಣಾ'

'ಸಮುದ್ರದ ಮೇಲೆ ಯಾನ ಮಾಡಿದ್ದೀಯಾ...?

'ಹೌದು. ನಾನು ಒಬ್ಬ ಬೆಸ್ತ. ಬಲೆ ಬೀಸಿ ಅಲೆಗಳ ಮೇಲೆ ರಾತ್ರಿಗಳ ಕಳೆದಿರುವೆ'.